# ಬಳ್ಳಿಪುಷ್ಪ ಪಾರಂಬೋಲ್



■ ಚಿತ್ರ ಬರಹ :
ಚಂದ್ರಹಾಸ ಚಾರ್ಮಾಡಿ

**ಪ**ಶ್ಚಿಮಘಟ್ಟದ ಕಾಡುಗಳಲ್ಲಿ ಅಪರೂಪವಾಗಿ ಕಾಣಸಿಗುವ ಪಾರಂಬೋಲ್ ಬಳ್ಳಿ ಮೂರು ವರ್ಷಕ್ಕೊಮ್ಮೆ ಹೂ ನೀಡುತ್ತದೆ. ಹೂ ಬಿಟ್ಟು ಎರಡು ದಿನಗಳಲ್ಲಿ ಹೂ ಒಣಗಿ ಬಿಡುವುದು ಇದರ ವಿಶೇಷತೆ.

ಈ ಬಳ್ಳಿ ಯಾವುದಾದರೂ ಮರ ಅಥವಾ ಬಿದಿರಿಗೆ ಸುತ್ತಿಕೊಂಡು ಹತ್ತರಿಂದ ಹದಿನೈದು ವರ್ಷಗಳವರೆಗೆ ಬದುಕುತ್ತದೆ. ಆಯುರ್ವೇದೀಯ ಔಷಧಿ ತಯಾರಿಯಲ್ಲಿ ಈ ಬಳ್ಳಿಗೆ ಬಹುಬೇಡಿಕೆಯಿದೆ.

ಬಳ್ಳಿಯನ್ನು ಕತ್ತರಿಸಿ ತಂದು ಗುದ್ದಿ ಅದರ ರಸ ತೆಗೆದು ಮೂಗಿಗೆ ಬಿಟ್ಟರೆ ಶೀತ, ನೆಗಡಿ ತಕ್ಷಣ ಕಡಿಮೆಯಾಗುತ್ತದೆ. ಕಟ್ಟಿದ ಮೂಗು ತೆರೆದುಕೊಳ್ಳಲು ಇದರ ಎಲೆಗಳನ್ನು ಕೈಯಲ್ಲಿ ತಿಕ್ಕಿ ಮೂಗಿಗೆ ಹಚ್ಚಬೇಕು. ಈ ಬಳ್ಳಿಯ ರಸ ಖಾರವಾಗಿದ್ದು, ತಲೆಗೆ ಹಚ್ಚಿದರೆ ಆಗಾಗ ಕಾಡುವ ತಲೆನೋವು ಶಮನಗೊಳ್ಳುತ್ತದೆ.

ಈ ಬಳ್ಳಿಯ ಪುಷ್ಪವಂತೂ ಇತರ ಪುಷ್ಪಗಳಿಗಿಂತ ಸಂಪೂರ್ಣ ಭಿನ್ನ. ಈ ಹೂವಿನ ವಿಶೇಷವೆಂದರೆ ದೇವರ ಪೂಜೆಗೆ ಮತ್ತು ತಲೆಗೆ ಮುಡಿಯಲು ಇದನ್ನು ಬಳಸುವುದಿಲ್ಲ. ಒಣಗಿದ ನಂತರ ಕೆಂಪು ಬಣ್ಣಕ್ಕೆ ಹೂ ತಿರುಗಿ, ಒಂದು ವಾರದ ನಂತರ ಬಳ್ಳಿಯಿಂದ ಬೇರ್ಪಡುತ್ತದೆ. ಒಂದು ಇಂಚು ಉದ್ದದ ಬಳ್ಳಿಗೆ ಈಗ ರೂ. 5 ರಿಂದ 6ರಷ್ಟು ದರವಿದ್ದು, ಆಯುರ್ವೇದ ಸಂಸ್ಥೆಗಳಿಂದ ಬೇಡಿಕೆಯನ್ನೂ ಹೊಂದಿದೆ.

